ದಿನಾಂಕ 22-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯವರ ಪರವಾಗಿ ಶ್ರೀ ಪಿಕೆ ವಕೀಲರವರಿಂದಃ**

1 ನೇ ಪ್ರತಿವಾದಿಗೆ ಮತ್ತು ನಮಗೆ ಯಾವುದೇ ಮನಸ್ತಾಪ ಇರುವುದಿಲ್ಲ. ಮಾತುಕತೆ ಜಾರಿಯಲ್ಲಿದೆ. ನಾವು ಇಲ್ಲಿ ಬಂದರೆ ನಮ್ಮ ತಂದೆ ಮನೆಗೆ ಹೋಗಬೇಕಾಗುತ್ತದೆಂದರೆ ಸರಿ. ನನ್ನ ವಿದ್ಯಾಭ್ಯಾಸ ಉಡುಪಿಯ ಬೋರ್ಡ್ ಹೈಸ್ಕೂಲ್ ನಲ್ಲಿ ಆಗಿರುತ್ತದೆ. ನಾನು ಐಟಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಸದ್ರಿ ಕೋರ್ಸ್ ನಿಂದ ಕಂಪ್ಯೂಟರ್ ಕೆಲಸ ಸಿಗುತ್ತದೆ. ಆದರೆ ಸಿಗಲಿಲ್ಲ, ಆದ್ದರಿಂದ ಪೌರೋಹಿತ್ಯ ಕೆಲಸ ಮಾಡುತ್ತಿದ್ದೇನೆ. ನಾನು ವೇದ ವಿದ್ಯಾಭ್ಯಾಸವನ್ನು ಉಡುಪಿಯಲ್ಲಿ ಮಾಡಿರುತ್ತೇನೆ. ಸದ್ರಿ ಕೋರ್ಸ್ ಗೆ ಯಾವುದೇ ಪ್ರಮಾಣ ಪತ್ರ ಕೊಡುವುದಿಲ್ಲ. ಅದರಲ್ಲಿ ಪೌರೋಹಿತ್ಯ ಮತ್ತು ವೇದ ವಿದ್ಯಾಭ್ಯಾಸ ಕಲಿಸುತ್ತಾರೆ. ನನಗೆ ಸುಧಾಮಂಗಳ ಮಾಡಿರುವುದಿಲ್ಲ. ಕಳೆದ 20 ವರ್ಷಗಳಿಂದ ಮಾಡುತ್ತಿದ್ದೇನೆ. ನಾನು ಶ್ರಿ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕೆಲಸ ಮಾಡುತ್ತಿದ್ದೇನೆ, ಅದು ಪ್ರಸಿದ್ಧ ದೇವಸ್ಥಾನವೆಂದರೆ ಸರಿ. ಅದರಲ್ಲಿ ನಾಗಾರಾಧನೆ ಮಾಡುತ್ತೇನೆ. ಆಶ್ಲೇಷ ಬಲಿ ದಿನಕ್ಕೆ ಎಷ್ಟು ಆಗುತ್ತದೆಂದು ನನಗೆ ಸರಿಯಾಗಿ ಹೇಳಲು ಬರುವುದಿಲ್ಲ. ಏಕಾದಶಿ ದಿವಸ ಬಿಟ್ಟು ಎಲ್ಲಾ ದಿನಗಳಲ್ಲೂ ಬ್ಯುಸಿ ಇರುತ್ತದೆ. ನಮ್ಮ ಹೆಂಡತಿ ಮಕ್ಕಳೆಲ್ಲಾ ಅಲ್ಲೇ ವಾಸವಾಗಿರುತ್ತಾರೆ. ನನಗೆ ಮದುವೆಯಾಗಿ 4 ವರ್ಷಗಳಾಗಿರುತ್ತವೆ. ಮದುವೆಯಾದ ನಂತರ ನಾನು ಶ್ರಿ ಕುಕ್ಕೆ ಸುಬ್ರಹ್ಮಣ್ಯದಲ್ಲಿರಲಿಲ್ಲ. ಮದುವೆಯಾಗುವ ಪೂರ್ವದಲ್ಲಿ ನಾನು ವಾರದಲ್ಲಿ 3 ದಿನ ಇಲ್ಲಿ ಇರುತ್ತಿದ್ದೆ. ನಂತರ ಉಡುಪಿಗೆ ಬರುವುದು ಹೋಗುವುದು ಮಾಡುತ್ತಿದ್ದೆ. ನಾನು ಉಡುಪಿಯ ದಾವಾ ಆಸ್ತಿಯ ಮನೆಯಲ್ಲೇ ನಾನು ಪೋಷಕರ ಜೊತೆ ಇದ್ದೆ. ಸದ್ರಿ ಮನೆಯಲ್ಲಿ ನಾನು, ನನ್ನ ಅಜ್ಜಿ, ನನ್ನ ತಾಯಿ ಇರುತ್ತೇವೆ. ನಮ್ಮ ಮಕ್ಕಳೆಲ್ಲಾ ಶಾಲೆಗೆ ಹೋಗುವುದು ಶ್ರಿ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಎಂದರೆ ಸರಿ. ನನ್ನ ತಂದೆಯ ಮೇಲೆ ಮಾಡಿರುವ ವ್ಯಾಜ್ಯಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಿಂದ

ನೋಟೀಸ್ ಬಂದಿರುತ್ತದೆಂದರೆ ಸರಿ. ಸದ್ರಿ ನೋಟೀಸ್ 2021 ನೇ ಇಸವಿಯಲ್ಲಿ ಬಂದಿರುತ್ತದೆಂದರೆ ಸಾಕ್ಷಿದಾರರು ಮುಂದುವರೆದು ಇತ್ತೀಚೆಗೆ ಬಂದಿದೆಂದು ನುಡಿಯುತ್ತಾರೆ. ಇತ್ತೀಚೆಗೆ ಬಂದ ವಿಷಯ ಸುಮಾರು 6 ತಿಂಗಳುಗಳಾಗಿರುತ್ತದೆ. ಸುಮಾರು 6 ತಿಂಗಳಿಗಿಂತ ಮುಂಚೆ ವ್ಯಾಜ್ಯ ಇಲ್ಲಿದೆಂದು ನನಗೆ ಗೊತ್ತಿರಲಿಲ್ಲ. ವ್ಯಾಜ್ಯ ಮಾಡುವ ಸಮಯದಲ್ಲಿ ನಾನು ಸದ್ರಿ ವಿಷಯ ನನಗೆ ಗೊತ್ತಿರಲಿಲ್ಲ, ಇತ್ತೀಚೆ ಗೊತ್ತಾಗಿರುತ್ತದೆ. ಅದರಲ್ಲಿ ಎಷ್ಟು ಪಾಲು ಕೇಳಿರುತ್ತಾನೆಂದು ನನಗೆ ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿಯ ವಕೀಲರ ಹೆಸರು ಗೊತ್ತಿದೆ ಆದರೆ ಹೇಳಲು ಬರುವುದಿಲ್ಲ. ನನ್ನ ವಕೀಲರು ನ್ಯಾಯಾಲಯದ ಮುಂದಿರುವ ವಕೀಲರಾದ ಶ್ರೀ ಎನ್.ಕೆ. ಆಚಾರ್ಯರವರು. ನಮ್ಮ ವಕೀಲರು ಸದ್ರಿ ವ್ಯಾಜ್ಯದ ಬಗ್ಗೆ ನನಗೆ ತಿಳಿಸಿರುತ್ತಾರೆ. ವಾದಿ ಸದ್ರಿ ವ್ಯಾಜ್ಯದಲ್ಲಿ ಏನು ಸಾಧನೆ ಮಾಡುತ್ತಿದ್ದಾರೆಂದು ನನಗೆ ಗೊತ್ತಿದೆ, ವಾದಿಯವರು ನಮಗೆ ನ್ಯಾಯ ಬೇಕೆಂದು ವ್ಯಾಜ್ಯವನ್ನು ಮಾಡುತ್ತಿದ್ದಾರೆ. ನಮ್ಮ ತಂದೆ ಲಿಖಿತ ಹೇಳಿಕೆ ಹಾಕಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಶಾರದ ಮತ್ತು ಸುಮತಿ ರವರು ಏನು ಸಾಧನೆ ಮಾಡುತ್ತಿದ್ದಾರೆಂದರೆ ಸಾಕ್ಷಿದಾರರು ಪಾಲು ಬೇಕೆಂದು ಅರ್ಜಿಯನ್ನು ಹಾಕಿರುತ್ತಾರೆಂದು ನುಡಿಯುತ್ತಾರೆ. ಲೀಲಾವತಿಯವರು ಏನು ಸಾಧನೆ ಮಾಡುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. ಅವರು ಏನು ಸಾಧನೆ ಮಾಡುತ್ತಿದ್ದಾರೆಂದು ನಾನು ನಮ್ಮ ವಕೀಲರ ಬಳಿ ತಿಳಿದುಕೊಂಡಿರುವುದಿಲ್ಲ. ಸದ್ರಿ ವಿಷಯವನ್ನು ಕೇಳಲಿಕ್ಕೆ ಯಾವುದೇ ಅಡ್ಡಿ ಆತಂಕವಿರಲಿಲ್ಲ. ಸದ್ರಿ ವ್ಯಾಜ್ಯದ ಬಗ್ಗೆ ನನ್ನ ತಂದೆಯ ಜೊತೆ ಏನೂ ಮಾತುಕತೆ ನಡೆಸಿಲ್ಲ. ನನ್ನ ತಂದೆಯವರು ನ್ಯಾಯಾಲಯಕ್ಕೆ ಹಾಜರಾಗಿ ರಾಜೀ ಪಂಚಾಯ್ತಿ ಆದ ಬಗ್ಗೆ ನಮಗೆ ಹೇಳಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಬರಲು ಕಾರಣವೇನು ಎಂದರೆ ಸಾಕ್ಷಿದಾರರು ನಮಗೆ ಒಂದು ವಿಲ್ ಬರೆದುಕೊಟ್ಟಿರುತ್ತಾರೆ, ಅದರ ಮೇಲೆ ಸಾಕ್ಷಿ ನುಡಿಯಲು ಹೋಗಬೇಕಾಗುತ್ತದೆಂದು

ತಿಳಿದುಕೊಂಡಿರುತ್ತೇನೆಂದು ನುಡಿಯುತ್ತಾರೆ. ನನ್ನ ತಂದೆಯವರಿಗೆ ಸದ್ರಿ ವಿಲ್ ನಾಮೆಯನ್ನು ಬರೆದವರಾರು ಎಂದರೆ ಸಾಕ್ಷಿದಾರರು ನಮ್ಮ ಅಜ್ಜಿ ನನಗೆ ವಿಲ್ ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನನ್ನ ಅಜ್ಜಿಯವರು 2017 ರಂದು ಮೃತಪಟ್ಟಿರುತ್ತಾರೆ. ಸದ್ರಿ ವಿಲ್ ನಾಮೆ ಇದೆ ಎಂದು ನನ್ನ ತಂದೆಯವರಿಗೆ ಇದೆಂದು ಗೊತ್ತಿರಲಿಲ್ಲ. ನನ್ನ ತಂದೆಯವರು ಲಿಖಿತ ಹೇಳಿಕೆಯನ್ನು ಹಾಕುವ ಸಮಯದಲ್ಲಿ ಸದ್ರಿ ವಿಲ್ ನಾಮೆ ಮೂಲಕ ಆಸ್ತಿ ಬಂದಿರುತ್ತದೆಂದು ಬರೆದಿದ್ದು ಇದೆಯಾ ಅಥವಾ ಇಲ್ಲವಾ ಎಂದು ನನಗೆ ನಿಖರವಾಗಿ ಗೊತ್ತಿರುವುದಿಲ್ಲ. ನಾನು ಹೇಳುವ ಸದ್ರಿ ವಿಲ್ ನಾಮೆಯ ಬಗ್ಗೆ ಯಾರು ಮಾಹಿತಿಯನ್ನು ನೀಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಹೇಳುವ ಸದ್ರಿ ವಿಲ್ನಾಮೆ ನನ್ನ ಬಳಿ ಯಾವಾಗ ಬಂತು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ, ಆದರೆ ಅವರು ಮೃತಪಡುವ ಪೂರ್ವದಲ್ಲಿ ಬರೆದುಕೊಟ್ಟಿರುತ್ತಾರೆಂದು ಮಾಹಿತಿ ಇದೆ. ಎಷ್ಟು ರೂಪಾಯಿಯ ಛಾಪ ಕಾಗದದ ಮೇಲೆ ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದ್ರಿ ವಿಲ್ ನಾಮೆ ಎಷ್ಟು ಪುಟಗಳಿವೆ ಎಂದರೆ 3 ಪುಟಗಳಿರುತ್ತವೆ. ಸದ್ರಿ ವಿಲ್ ನಾಮೆಗೆ ನಮ್ಮ ಮನೆಯ ಹತ್ತಿರದವರಾದ ಯಾಧವ ಶೇರೇಗಾರ್ ರವರು ಸಹಿ ಹಾಕಿರುತ್ತಾರೆ. ಬೇರೆ ಯಾರು ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ಯಾಧವ ಶೇರೇಗಾರ್ ರವರು ನನ್ನ ಅಜ್ಜಿಯನ್ನು ಯಾವುದಾದರೂ ಸಮಾರಂಭ ಇದ್ದರೆ ಅವರೇ ನಮ್ಮ ಅಜ್ಜಿಯನ್ನು ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಅವರು ನಮಗೆ ಆತ್ಮೀಯರಲ್ಲ ಕೇವಲ ಪರಿಚಯಸ್ಥರು. ನಮ್ಮ ಮನೆಗೂ ಮತ್ತು ಅವರ ಮನೆಗೂ 300 ಮೀಟರ್ ಅಂತರವಿರುತ್ತದೆ. ಅವರ ಬಳಿ ಕಾರು ಇರುತ್ತದೆ. ಸದ್ರಿ ಕಾರನ್ನು ಬಾಡಿಗೆಗೆ ಕೊಡುತ್ತಾರೆ. ಯಾಧವ ಶೇರೇಗಾರ್ ರವರು ಎನ್ನುವ ವ್ಯಕ್ತಿ ನಮಗೆ ತುಂಬಾ ಆತ್ಮೀಯರು ನಾನು ಹೇಳಿದ ರೀತಿ ಅವರು ಯಾವುದೇ ಕಾಗದದ ಮೇಲೆ ಸಹಿ ಹಾಕುತ್ತಾರೆಂದರೆ ಇಲ್ಲ. ನಾನು ಹೇಳು ಸದ್ರಿ ವಿಲ್

ನಾಮೆಗೆ ಒಂದು ಸಹಿಯನ್ನು ಮಾತ್ರ ನೋಡಿರುತ್ತೇನೆ, ಇನ್ನೊಂದು ಸಹಿ ಸರಿಯಾಗಿ ನೋಡಿರುವುದಿಲ್ಲ. ಇನ್ನೊಬ್ಬ ಸಾಕ್ಷಿದಾರರು ಚಂದ್ರಶೇಖರ ಆಚಾರ್ಯರವರು ಸಹಿ ಮಾಡಿರುತ್ತಾರೆ. ಅವರ ತಂದೆಯ ಹೆಸರು ಮುಖ್ಯಪ್ರಾಣ. ಅವರು ಎಲ್ಲಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಅವರಿಗೆ ಕೆಲಸ ಏನಿದೆ ನನಗೆ ಗೊತ್ತಿರುವುದಿಲ್ಲ. ಅವರ ಮೇಲೆ ಏಳೆಂಟು ಕ್ರಿಮಿನಲ್ ಕೇಸ್ ಇರುವ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಕೆಲವು ದಾಖಲೆಗಳನ್ನು ಮಠದಲ್ಲಿ ಸೃಷ್ಟಿ ಮಾಡಿ ಸಲ್ಲಿಸಿದ ಕಾರಣ ಅವರಿಗೆ ಮಠದದಿಂದ ಹೊರಗೆ ಹಾಕಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅವರು ಒಂದು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಸಾಕ್ಷಿದಾರರು ಬ್ರಾಹ್ಮಣರು ಆಗಿದ್ದ ಕಾರಣ , ನಮಗೆ ಅವರು ತುಂಬಾ ಆತ್ಮೀಯರು ನಾನು ಹೇಳಿದ ಹಾಗೆ ವಿಲ್ ಗೆ ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ಚಂದ್ರಶೇಖರ ಆಚಾರ್ಯರವರು ಎಷ್ಟು ಸಹಿ ಹಾಕಿರುತ್ತಾರೆಂದರೆ 2 ಸಹಿ ಹಾಕಿರುತ್ತಾರೆ. ನಾನು ಹೇಳು ವಿಲ್ ನಾಮೆಯು ಬೆರಳಚ್ಚು ಮಾಡಿರುತ್ತಾರೆ. ಸದ್ರಿ ವಿಲ್ ನಾಮೆಯನ್ನು ಬೆರಳಚ್ಚು ತಾಂತ್ರಿಕದಿಂದ ಮಾಡಿರುತ್ತಾರೋ ಅಥವಾ ಹಳೆಯ ಟೈಪಿಂಗ್ ಮಿಷಿನ್ ನಿಂದ ಬೆರಳಚ್ಚು ಮಾಡಿರುತ್ತಾರೆಂದರೆ ಆ ಸಮಯದಲ್ಲಿ ನಾನಿರಲಿಲ್ಲ. ಕಳೆದ 10 ವರ್ಷದಿಂದ ತಾಂತ್ರಿಕ ಬೆರಳಚ್ಚು ಮಾಡುವುದು ಚಾಲ್ತಿಯಲ್ಲಿದೆಂದರೆ ಸರಿ. ಅದಕ್ಕಿಂತ ಮುಂಚೆ ಹಳೆಯ ಟೈಪಿಂಗ್ ಮಿಷಿನ್ ನಿಂದಲೇ ಮಾಡುತ್ತಿದ್ದರೆಂದರೆ ಸರಿ. ಸದ್ರಿ ವಿವಾದಿತ ವಿಲ್ ನಾಮೆ ನನಗೆ ನನ್ನ ಅಜ್ಜಿಯವರು ಮೃತಪಡುವ ಮುಂಚೆ ನನಗೆ ಸಿಕ್ಕಿರುತ್ತದೆ. ಅಜ್ಜಿಯವರು ಮೃತಪಡುವುದಕ್ಕಿಂತ ಪೂರ್ವದಲ್ಲಿ ಸದ್ರಿ ವಿಲ್ ನ್ನು ಕೊಟ್ಟಿದ್ದರು. ಸದ್ರಿ ವಿಲ್ ನಾಮೆಯ ಬಗ್ಗೆ ನಾನು ನನ್ನ ಅಜ್ಜಿಯ ಬಳಿ ವಿಚಾರಿಸಿರುವುದಿಲ್ಲ. ಅವರು ಕೊಟ್ಟರು ನಾನು ತೆಗೆದುಕೊಂಡಿರುತ್ತೇನೆ. ಸದ್ರಿ ವಿಲ್ ನಾಮೆ ಯಾರು ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಅಜ್ಜಿಯವರು ಮೃತಪಟ್ಟ ನಂತರ ವಿಲ್ ನಾಮೆಯ ಅನುಸಾರವಾಗಿ ಪಹಣಿ ಪತ್ರಿಕೆಗಳಲ್ಲಿ

ಹೆಸರು ತರಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ.10 ನನ್ನ ಅಜ್ಜಿಯ ಹೆಸರಿನಲ್ಲಿರುತ್ತದೆಂದರೆ ಸರಿ. ಅದರ ಸರ್ವೇ ನಂಬರ್ ಗೊತ್ತಿಲ್ಲ. ಸದ್ರಿ ಸರ್ವೆ ನಂಬರ್ ನಲ್ಲಿ ಮನೆ ಇದೆಂದು ನನಗೆ ಗೊತ್ತಿದೆ. ಸದ್ರಿ ಮನೆಯ ಡೋರ್ ನಂಬರ್ 8-3-4 ಎಂದು ಇರುತ್ತದೆ. ಸದ್ರಿ ಮನೆಯ ಜಾಗ 24 ಸೆಂಟ್ಸ್ ಇದೆ. ನನ್ನ ವಿವಾದಿತ ವ್ಯಾಜ್ಯದಲ್ಲಿ ಸದ್ರಿ ಮನೆಯ ಜಾಗ 22 ಸೆಂಟ್ಸ್ ಇದೆ. ವಾದಿಯವರು ಸದ್ರಿ ವ್ಯಾಜ್ಯದಲ್ಲಿ ಎಷ್ಟು ದಾಖಲೆಗಳನ್ನು ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಯಾವ ಆಧಾರದ ಮೇಲೆ ವಾದಿಯವರು ಪಾಲನ್ನು ಕೇಳುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. ನಿಪಿ.6 ರಲ್ಲಿ ನನ್ನ ಅಜ್ಜನ ಹೆಸರು ಕೃಷ್ಣಪ್ಪ ಚೆಲುವಮ್ಮ ಎಂದು ಇದೆಂದರೆ ನಿಜ. ಸದ್ರಿ ವಿಷಯ ನನಗೆ ಗೊತ್ತಿರಲಿಲ್ಲ. ಇದನ್ನು ಯಾರು ಮಾಡಿದ್ದು ಎಂದರೆ ನನಗೆ ಗೊತ್ತಿಲ್ಲ. ನಿಪಿ.6 ರಲ್ಲಿ ನಾನು ಮತ್ತು ನನ್ನ ತಂದೆಯವರು ಸೇರಿ ನನ್ನ ಅಜ್ಜಿಯ ಎಲ್ಲಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ತಿದ್ದುಪಡಿ ಮಾಡಿರುತ್ತೇವೆಂದರೆ ಸರಿಯಲ್ಲ. ನಿಪಿ.9 ರಲ್ಲಿ ಚೆಲುವಮ್ಮ ರವರ ವಾರಸುದಾರರ ಪಟ್ಟಿ ಎಂದರೆ ಹೌದು, ಆದರೆ ನನ್ನ ಹೆಸರು ಅದರಲ್ಲಿ ಇರುವುದಿಲ್ಲ. ನಿಪಿ.9 ರಲ್ಲಿ ನನ್ನ ಹೆಸರು ಇಲ್ಲವೆಂದು ಈಗ ಗೊತ್ತಾಗಿರುತ್ತದೆ. ವಾದಿಯವರು ಪಾಲನ್ನು ನಿಪಿ.9 ರ ಆಧಾರದ ಮೇಲೆ ಪಾಲನ್ನು ಕೇಳುತ್ತಿದ್ದಾರೆಂದರೆ ಸರಿ. ನಿಪಿ.9 ಸುಳ್ಳು ದಾಖಲೆ ಇದೆಂದು ಮುಂದುವರೆದು ನುಡಿಯುತ್ತಾರೆ. ನನ್ನ ಅಜ್ಜಿಯವರು ಕನ್ನಡ ಭಾಷೆಯಲ್ಲಿ ಸಹಿ ಹಾಕುತ್ತಾರೆ. ಸದ್ರಿ ವಿವಾದಿತ ವಿಲ್ ನಾಮೆಗೆ ನನ್ನ ಅಜ್ಜಿಯವರು ಕನ್ನಡ ಭಾಷೆಯಲ್ಲಿ ಸಹಿ ಹಾಕಿರುತ್ತಾರೆ. ಒಟ್ಟು ಎಷ್ಟು ಸಹಿ ಹಾಕಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಅಜ್ಜಿಯವರಿಗೆ ಒಟ್ಟು 5 ಜನ ಮಕ್ಕಳು. ವಾದಿಗೆ ಎಷ್ಟು ಜನ ಮಕ್ಕಳೆಂದರೆ ವಾದಿಯವರಿಗೆ 2 ಜನ ಮಕ್ಕಳು. ಅವರು ಉಡುಪಿಯಲ್ಲಿದ್ದಾರೆ. 1 ನೇ ಪ್ರತಿವಾದಿಗೆ 4 ಜನ ಮಕ್ಕಳು. ಮೃತ ವಿಶ್ವನಾಥರವರಿಗೆ 2 ಮಕ್ಕಳು. ಸುಮತಿಗೆ 2 ಮಕ್ಕಳು, ಶಾಂತಳಿಗೆ ಒಂದು ಮಕ್ಕಳು. ನನ್ನ ಅಜ್ಜಿಯವರು ಮೃತಪಡುವ ಕಾಲಕ್ಕೆ 100

ವರ್ಷವಾಗಿತ್ತು. 60 ವರ್ಷದ ನಂತರ ಸಾಮಾನ್ಯರಿಗೆ ಮನಷ್ಯರಿಗೆ ಬಿಪಿ, ಷುಗರ್ ಖಾಯಿಲೆ ಬರುವುದು ಸಹಜ ಎಂದರೆ ಸಾಕ್ಷಿದಾರರು ಅವರಿಗೆ ಬರಲಿಲ್ಲ. ನಾನು ಹೇಳುವ ಷದ್ರಿ ವಿಲ್ ನಾಮೆಯಲ್ಲಿ ನನಗೆ ಕುರಿತಾಗಿ ಅವರ ಪಾಲನ್ನು ಕೊಡಲು ಕಾರಣವನ್ನು ಇದರಲ್ಲಿ ನಮೂದು ಮಾಡಿರುತ್ತಾರೆ, ಕಾರಣವೇನೆಂದರೆ ನಾವು ಅವರಿಗೆ ಸರಿಯಾಗಿ ನೋಡಿಕೊಳ್ಳುತ್ತಿದ್ದೇವೆ, ಅದಕ್ಕೆ ನಮಗೆ ಅವರು ವಿಲ್ ನ್ನು ಮಾಡಿರುತ್ತಾರೆ. ವರ್ಷಪೂರ್ತಿ ನಾವು ಅವರ ಚಾಕರಿಯನ್ನು ಮಾಡಿರುತ್ತೇವೆಂದರೆ ಸಾಕ್ಷಿದಾರರು ನನ್ನ ಗೈರು ಹಾಜರಿಯಲ್ಲಿ ನಮ್ಮ ಅಮ್ಮ ಚಾಕರಿ ಮಾಡುತ್ತಿದ್ದರು ಮತ್ತು ನನಗೆ ಕೆಲಸದಿಂದ ಅವಕಾಶ ಸಿಕ್ಕಿದ ಸಮಯದಲ್ಲಿ ನಾನು ಚಾಕರಿಯನ್ನು ಮಾಡಿರುತ್ತೇನೆ. ನನ್ನ ಅಜ್ಜಿಯವರಿಗೆ ಹುಷಾರು ತಪ್ಪಿ ದ್ದರೆ ನಾನು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ಸಾಮಾನ್ಯವಾಗಿ ದಿನ ಚಟುವಟಿಕೆಗಳಲ್ಲಿ ಅವಕಾಶ ಸಿಕ್ಕಿದರೆ ಸಹಾಯ ಮಾಡುತ್ತಿದ್ದೆ. ಸಾಮಾನ್ಯವಾಗಿ ತಾಯಿ ಹುಷಾರು ತಪ್ಪಿ ದರೆ ಅವರ ಹೆಣ್ಣು ಮಕ್ಕಳು ಚಾಕರಿ ಮಾಡುತ್ತಾರೆಂದರೆ ಅದು ವಾಸ್ತು ಸ್ಥಿತಿ ಮೇಲೆ ಹೋಗುತ್ತದೆಂದು ನುಡಿಯುತ್ತಾರೆ. ನನ್ನ ಅಜ್ಜಿಯವರು ನಮ್ಮೊಟ್ಟಿಗೆ ಇದ್ದದ್ದೇ ಇಲ್ಲ, ನಾವು ನೋಡಿಕೊಂಡೇ ಇರುವುದಿಲ್ಲ, ಎಲ್ಲವನ್ನು 4 ನೇ ಪ್ರತಿವಾದಿಯವರು ನೋಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಚೆಲುವಮ್ಮರವರು ಉಳಿದ ಮಕ್ಕಳಿಗೆ ಪಾಲನ್ನು ಕೊಡದೇ ಇರಲು ಏನಾದರೂ ಸಕಾರಣಗಳನ್ನು ಬರೆದಿರುತ್ತಾರೆಯೇ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿಗೆ ಅವರ 5 ಜನ ಮಕ್ಕಳ ಮೇಲೂ ಸಮಾನವಾದ ಪ್ರೀತಿ ಇತ್ತೆಂದರೆ ಸರಿಯಲ್ಲ. ನಾನು ಊರಿನಲ್ಲೇ ಇದ್ದದ್ದೇ ಇಲ್ಲ, ನಾನು ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸೇವೆ ಮಾಡುತ್ತಿದ್ದೆ ಆದ ಕಾರಣ ನಾನು ಊರಿಗೆ ಬರಲೇ ಇಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿಯವರು 2005 ನೇ ಇಸವಿಯಿಂದ ಅವರ ಆರೋಗ್ಯ ಸ್ಥಿತಿ ಸರಿ ಇರಲಿಲ್ಲವೆಂದರೆ ಸರಿಯಲ್ಲ. ನನ್ನ ಅಜ್ಜಿಯವರಿಗೆ ಪ್ರಾಯವಾದ ಕಾರಣ ಅವರು

ನಡೆದುಕೊಂಡು ಹೋಗಲು ಸಾಧ್ಯವಾಗುತ್ತಿರಲಿಲ್ಲ ಎಂದರೆ ಅವರಿಗೆ ನಡೆದುಕೊಂಡು ಹೋಗಲು ತುಂಬಾ ತೊಂದರೆ ಇತ್ತು ಎಂದರೆ ಸರಿಯಲ್ಲ. ಅವರ ಮಾನಸಿಕ ಸ್ಥಿತಿ ಒಳೆಯ ರೀತಿ ಇರಲಿಲ್ಲವೆಂದರೆ ಸರಿಯಲ್ಲ. ಸದ್ರಿ ವಿವಾದಿತ ವಿಲ್ ನಾಮೆಯನ್ನು ನಾನು ಮತ್ತು ನನ್ನ ತಂದೆಯವರು ಸೇರಿ ತಯಾರು ಮಾಡಿರುತ್ತೇವೆಂದರೆ ಸರಿಯಲ್ಲ ಮತ್ತು ಸದ್ರಿ ವಿಲ್ ನ ಮೂಲಕ ಹೆಚ್ಚಿ ಗೆ ಪಾಲನ್ನು ಕಬಳಿಸುವ ಉದ್ದೇಶದಿಂದ ಸದ್ರಿ ವಿಲ್ ನಾಮೆಯನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ನಾನು ಹೇಳುವ ಸದ್ರಿ ವಿಲ್ ನಾಮೆಯ ಮೂಲಕ ಪಾಲು ಬರಬೇಕೆಂದು ಪ್ರತಿ ಹಕ್ಕನ್ನು ಹಾಕಿರುವುದಿಲ್ಲ. ಆ ರೀತಿ ಪ್ರತಿ ಹಕ್ಕನ್ನು ಹಾಕ್ಕನ್ನು ಹಾಕಲು ನನಗೆ ತೊಂದರೆ ಇರಲಿಲ್ಲ. ನಾನು ನ್ಯಾಯಾಲಯಕ್ಕೆ ಶುಲ್ಕವನ್ನು ವಕೀಲರ ಮೂಲಕ ಕಟ್ಟಿಸಿರುತ್ತೇನೆ. ಎಷ್ಟು ಕಟ್ಟಿರುತ್ತೇನೆಂದು ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.